ದಿನಾಂಕ 22.10.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.

**ಅನುಮತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಃ- 1 ರಿಂದ 5 ಮತ್ತು 47 ರಿಂದ 55 ನೇ ಎದುರುದಾರರ ಪರವಾಗಿ ಶ್ರೀ. ಯು ಸಿ ಜೆ ವಕೀಲರಿಂದಃ-**

ಓರ್ವ ಪಶುಪತಿ ರವರ ಮಗ ಚೇತನ್ ಅಂದರೆ ಈ ಪ್ರಕರಣದಲ್ಲಿರುವ ಪ್ರತಿವಾದಿ ಸಂಖ್ಯೆ 10(ಬಿ) ರವರು ತಮ್ಮ ವಿಚಾರಣೆ ನೀಡಿದ್ದಾರೆ ಮತ್ತು ಅವರನ್ನು RW.2 ಎಂದು ಪರಿಗಣಿಸಲಾಗಿದೆ. ಸದರಿ RW.2 ರವರನ್ನು ಪಾಟೀಸವಾಲು ಮಾಡುವ ಸಮಯದಲ್ಲಿ ಒಟ್ಟು 5 ದಾಖಲೆಗಳನ್ನು ಮುಖಾಬಲೆ (confront) ಮಾಡಲಾಗಿತ್ತು ಮತ್ತು ಆ ವ್ಯಕ್ತಿಯು ಆ ದಾಖಲೆಗಳನ್ನು ಒಪ್ಪಿಕೊಂಡಿದ್ದರು. ಆದರೆ ಸದರಿ ದಾಖಲೆಗಳು ಸದರಿ ಸಾಕ್ಷಿದಾರರ ಹಿಂದಿನ ಹೇಳಿಕೆ (previous statement) ಎಂಬ ವ್ಯಾಪ್ತಿಯ ಒಳಗೆ ಬರುವುದಿಲ್ಲ ಎಂಬ ಕಾರಣದಿಂದ ಸದರಿ ದಾಖಲೆಗಳನ್ನು ಈ ನ್ಯಾಯಾಲಯದವರು ಕೇವಲ identification ಉದ್ದೇಶಕ್ಕಾಗಿ ನಿ ಎಸ್ -01 ರಿಂದ ನಿ ಎಸ್ -5 ಎಂಬುದಾಗಿ ಗುರುತು ಮಾಡಿದ್ದಾರೆ. ಸದರಿ ದಾಖಲೆಗಳನ್ನು ನಾನು ನನ್ನ ಪರವಾದ ದಾಖಲೆಗಳು ಎಂಬುದಾಗಿ ನಿಶಾನೆಗಳನ್ನಾಗಿ ಗುರುತಿಸಿಕೊಳ್ಳಲು ಇಚ್ಚೆ ಹೊಂದಿದ್ದೇನೆ.

**ನಿ.ಎಸ್-1** ರಿಂದ **ನಿ.ಎಸ್-5** ಎಂದು ಗುರುತು ಆಗಿರುವ ದಾಖಲೆಗಳನ್ನು ಕ್ರಮವಾಗಿ **ನಿಆರ್-94** ರಿಂದ **ನಿಆರ್-98** ಎಂದು ಗುರುತಿಸಿದೆ.

ಆದಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ- 6, 8, 9 ನೇ ಎದುರುದಾರರು ಮತ್ತು 10 ನೇ ಎದುರದಾರರ ವಾರಸುದಾರರ ಪರವಾಗಿ ಶ್ರೀಮತಿ ಕೆ ಆರ್ ವಕೀಲರಿಂದಃ-**

ಯಾವ ದಾಖಲೆಗಳನ್ನು ನಾನು **ನಿಆರ್-94 ರಿಂದ ನಿಆರ್-98** ಎಂಬುದಾಗಿ ಗುರುತಿಸಿಕೊಂಡಿದ್ದೇನೋ ಸದರಿ ದಾಖಲೆಗಳನ್ನು ನಾನು ಮಾನ್ಯ ಸಿವಿಲ್ Judge ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದೆನು ಮತ್ತು ಸದರಿ ದಾಖಲೆಗಳನ್ನು ನ್ಯಾಯಾಲಯದವರು ಪರಿಗಣನೆಗೆ ತೆಗೆದುಕೊಂಡು ಈಗಾಗಲೇ ತೀರ್ಮಾನವನ್ನು ನೀಡಿದ್ದಾರೆ ಎಂದರೆ ಸರಿ.

O.S. 46/2010 ಪ್ರಕರಣದಲ್ಲಿ ಈಗಾಗಲೇ ತೀರ್ಮಾನ ಆಗಿದೆ ಮತ್ತು ಸದರಿ ದಾವೆಯನ್ನು ವಜಾ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಯು ಸ್ವಯಂ ಪ್ರೇರಿತರಾಗಿ " ಅದರ ಮೇಲೆ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ " ಎಂದು ನುಡಿದಿದ್ದಾರೆ.

Misc. 25/2019
RW-6/ಚಂದ್ರಶೇಖರ

O.S. 46/2010 ಪ್ರಕರಣದಲ್ಲಿ ಆಗಿರುವ ತೀರ್ಮಾನದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲಾಗಿದೆ ಎನ್ನುವ ಸಂಬಂಧ ದಾಖಲೆಗಳನ್ನು ಈ ನ್ಯಾಯಾಲಯದ ಮುಂದೆ ಹಾಜರು ಮಾಡಿರುವುದಿಲ್ಲ. O.S. 46/2010 ಪ್ರಕರಣದಲ್ಲಿ ಆಗಿರುವ ತೀರ್ಮಾನದ ಧೃಡೀಕೃತ ನಕಲನ್ನು ಈ ಪ್ರಕರಣದಲ್ಲಿ ನಿಆರ್-93 ಎಂದು ಗುರುತು ಮಾಡಲಾಗಿದೆ ಎಂದರೆ ಸರಿ.

**ಪಾಟೀಸವಾಲುಃ- 7 ನೇ ಎದುರುದಾರರ ವಾರಸುದಾರರ ಪರವಾಗಿ ಶ್ರೀ. ಟಿ ಹೆಚ್ ಎ ವಕೀಲರಿಂದ**

**ಮಾನ್ಯ ವಕೀಲರು ಹಾಜರು ಇದ್ದಾರೆ ಮತ್ತು ಯಾವುದೇ ಪಾಟೀಸವಾಲು ಇಲ್ಲ ಎಂದು ನುಡಿದಿದ್ದಾರೆ.**

**ಪಾಟೀಸವಾಲುಃ- ಅರ್ಜಿದಾರರ ಪರವಾಗಿ ಶ್ರೀಮತಿ ಜಿ ಪಿ ಎಸ್ ವಕೀಲರಿಂದ**

**ಮಾನ್ಯ ವಕೀಲರು ಹಾಜರು ಇದ್ದಾರೆ ಮತ್ತು ಯಾವುದೇ ಪಾಟೀಸವಾಲು ಇಲ್ಲ ಎಂದು ನುಡಿದಿದ್ದಾರೆ.**

**ಪಾಟೀಸವಾಲುಃ- 56 ಮತ್ತು 57 ನೇ ಎದುರುದಾರರ ಪರವಾಗಿ ಮಾನ್ಯ ಜಿಲ್ಲಾ ಸರ್ಕಾರಿ ವಕೀಲರಿಂದಃ-**

O.S. 46/2010 ಪ್ರಕರಣದಲ್ಲಿ ಶಾಲೆಯವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಶಾಲೆಗೆ ಸೇರಿದ ಯಾವುದೇ ಆಸ್ತಿಗಳು O.S. 46/2010 ಪ್ರಕರಣದಲ್ಲಿ ವಸ್ತು ವಿಷಯಗಳು (subject matter) ಆಗಿರಲಿಲ್ಲ. ಶಾಲೆಗೆ ಸೇರಿದ ಆಸ್ತಿಗಳಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು.

**ಸೂಚನೆಃ- ಉಳಿದ ಎದುರುದಾರರು ಹಾಜರು ಇರುವುದಿಲ್ಲ ಮತ್ತು ಅವರ ಪರ ವಕೀಲರು ಹಾಜರುಇರುವುದಿಲ್ಲ. ಆದಕಾರಣದಿಂದ ಉಳಿದ ಎದುರುದಾರರ ಪರವಾಗಿ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.